ಅ) ಲಕ್ಕವಳ್ಳಿ ಹಾಗೂ ತಣಿಗೆ ಬೈಲು ವಿಭಾಗಕ್ಕೆ ವನ್ಯಜೀವಿ ಹಾಗೂ ಪಶುಸಂಗೋಪನೆಗಾಗಿ ಬಿಡುಗಡೆಯಾದ ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ವನ್ಯಜೀವಿ ಹಾಗೂ ಪಶುಸಂಗೋಪನೆ ವಿಭಾಗಕ್ಕೆ 2001-02ರಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಕೆಳಕಂಡಂತೆ ಹಣ ಬಿಡುಗಡೆಯಾಗಿದೆ.

ವನ್ಯಜೀವಿ ವಿಭಾಗ	ಪಶುಸಂಗೋಪನೆ ವಿಭಾಗ
186.02 ಲಕ್ಷಗಳು	12.00 ಲಕ್ಷಗಳು

ಆ) ಲಕ್ಕವಳ್ಳಿ ವನ್ಯಜೀವಿ ವಲಯಕ್ಕೆ ರೂ. 81.50 ಲಕ್ಷಗಳು ಹಾಗೂ ತಣಿಗೆ ಬೈಲು ವನ್ಯಜೀವಿ ವಲಯಕ್ಕೆ ರೂ. 24.60 ಲಕ್ಷಗಳು ಬಿಡುಗಡೆಯಾಗಿದೆ. ಪಶುಸಂಗೋಪನೆಗಾಗಿ ಹಣ ಬಿಡುಗಡೆಯಾಗಿರುವುದಿಲ್ಲ.

ಅರಣ್ಯ ಜಮೀನನ್ನು ಸಕ್ರಮಗೊಳಿಸುವುದು

1979(2351) - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1978ರಿಂದ ಅರಣ್ಯ ಜಮೀನನ್ನು ಬಗ್ಗರ ಹುಕುಂ ಮಾಡಿಕೊಂಡು ಬರುತ್ತಿರುವ ರೈತರಿಗೆ ಸಕ್ರಮಗೊಳಿಸಲು ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜಮೀನನ್ನು ಸಕ್ರಮಗೊಳಿಸಲು ಕಾನೂನಿಗೆ ತಿದ್ದುಪಡಿ ತರಲು ಸರ್ಕಾರ ಆಲೋಚಿಸಿದೆಯೇ; ಮಾಹಿತಿ ನೀಡುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಂದಿದೆ. ಕೇಂದ್ರ ಸರ್ಕಾರದ ನಿರ್ದೇಶನದ ಅನ್ವಯ 27-4-1978ರ ನಂತರ ಆಗಿರುವ ಎಲ್ಲಾ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ಮಾಡುವುದು ಕೇಂದ್ರ ಸರ್ಕಾರದ ಪರಿಮಿತಿಗೆ ಬರುತ್ತದೆ.

ಚಿಕ್ಕಮಗಳೂರು ಜಿಲ್ಲೆ ವನ್ಯಜೀವಿ ವಿಭಾಗ ಮತ್ತು ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಹಾಗೂ ತಣಿಗೆ ಬೈಲು ವಿಭಾಗಕ್ಕೆ ಅನುದಾನ

1980(2352) - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ ಕ್ಷೇತ್ರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ವನ್ಯಜೀವಿ ವಿಭಾಗಕ್ಕೆ 2002-03ನೇ ಸಾಲಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತು ವನ್ಯಜೀವಿ ಸಂರಕ್ಷಣೆಗೆ ನಿಯೋಜಿಸಿದ ಹಣವೆಷ್ಟು?

ಆ) ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹಾಗೂ ತಣಿಗೆಬೈಲು ವಿಭಾಗಕ್ಕೆ ಅಭಿವೃದ್ಧಿ ಮತ್ತು ವನ್ಯಜೀವಿ ವಿಭಾಗಕ್ಕೆ ನಿಯೋಜಿಸಿದ ಹಣವೆಷ್ಟು?